ಒ.ಎಸ್. ನಂಬರ್‌ಃ 56/2019
ಪಿಡಬ್ಲ್ಯೂಃ 1
ದಿನಾಂಕಃ 06.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಎಂ ಆರ್ ವಕೀಲರಿಂದಃ

ನನ್ನ ತಂದೆ ವೆಂಕಟರಮಣಪ್ಪ ಮೂಲತಃ ಹೊಸಕೋಟೆಯವರು . ಸದರಿಯವರು ಬಂಗಾರಪೇಟೆಯ ಗೊರವನಹಳ್ಳಿಯಲ್ಲಿ ಬಂದು ವಾಸವಾಗಿರುತ್ತಾರೆ ಎಂದರೆ 1964 ರ 7 ನೇ ತಿಂಗಳಿನಲ್ಲಿ ಬಂದು ವಾಸವಾಗಿರುತ್ತಾರೆ ಎನ್ನುತ್ತಾರೆ. ಬಂಗಾರಪೇಟೆ ತಾಲ್ಲೂಕಿನಲ್ಲಿ ನಮ್ಮ ತಂದೆಗೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರಲಿಲ್ಲ ಎಂದರೆ ಅವರ ಪಿತ್ರಾರ್ಜಿತ ಆಸ್ತಿಯನ್ನು ಮಾಡಿ ಇಲ್ಲಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ನಮ್ಮ ತಂದೆಗೆ ನಾನು, ಒಂದನೇ ಪ್ರತಿವಾದಿ ಸೇರಿಸಿ ಒಟ್ಟು 7 ಜನ ಮಕ್ಕಳು ಅವರ ಪೈಕಿ 5 ಜನ ಹೆಣ್ಣು ಮಕ್ಕಳು ಎಂದರೆ ಸರಿ . ಈ ದಾವೆಯಲ್ಲಿ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ . ನನಗಾಗಲೀ ನಮ್ಮ ತಂದೆಗಾಗಲೀ ಹೆಣ್ಣು ಮಕ್ಕಳು ಹಕ್ಕು ಬಿಡುಗಡೆ ಪತ್ರ ವನ್ನು ಏನಾದರೂ ಕುಟುಂಬದ ಆಸ್ತಿ ಸಂಬಂಧ ಬರೆದುಕೊಟ್ಟಿರುತ್ತಾರೆಯೇ ಅಂದರೆ ಇಲ್ಲ ಎನ್ನುತ್ತಾರೆ. ನಿಪಿ 7 ವಿಭಾಗ ಪತ್ರದಲ್ಲೂ ಕೂಡ ಹೆಣ್ಣು ಮಕ್ಕಳು ಪಕ್ಷಗಾರರಾಗಿಲ್ಲ ಎಂದರೆ ಸರಿ . ನನ್ನ ತಂದೆ ದಿನಾಂಕ 19.08.2016 ರಲ್ಲಿ ತೀರಿಕೊಂಡಿರುತ್ತಾರೆ.

ಈ ದಾವೆಯನ್ನು ಸಲ್ಲಿಸುವಾಗ ವಾದ ಪತ್ರದಲ್ಲಿ ನನ್ನ ತಂದೆ ತನ್ನ ಪಿತ್ರಾರ್ಜಿತ ಸ್ವತ್ತುಗಳನ್ನು ಹೊಸಕೋಟೆಯಲ್ಲಿಯೇ ಮಾರಾಟ ಮಾಡಿ ಅದರ ಹಣದಿಂದ ಬಂಗಾರಪೇಟೆಯ ಗೊರವನಹಳ್ಳಿಯಲ್ಲಿ ಆಸ್ತಿ ಖರೀದಿ ಮಾಡಿರುತ್ತಾರೆ ಎಂದು ನನ್ನ ವಕೀಲರಿಗೆ ನಾನು ಹೇಳಿರುತ್ತೇನೆಯೇ ಅಂದರೆ ಹೌದು ಎನ್ನುತ್ತಾರೆ. ನಿಪಿ 9 ನನ್ನ ತಂದೆಯವರು 1964 ರಲ್ಲಿ ಖರೀದಿ ಮಾಡಿದ ಸ್ವತ್ತಿನ ಕ್ರಯ ಪತ್ರವಾಗಿದ್ದು ಆ ಕ್ರಯ ಪತ್ರದಲ್ಲಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ದಾವಾ ಸ್ವತ್ತಿನ ವಿವರಣೆ ಇಲ್ಲ ಎಂದರೆ ಸರಿ . ಅದೇ ರೀತಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ದಾವಾ ಸ್ವತ್ತಿನ ವಿಸ್ತೀರ್ಣ ಮತ್ತು ಖಾತಾ ನಂಬರ್ ನಿಪಿ 9 ರಲ್ಲಿ ಇರುವುದಿಲ್ಲ ಎಂದರೆ ಇರುತ್ತದೆ ಎನ್ನುತ್ತಾರೆ. ನನ್ನ ತಂದೆ ಅವರ ಸ್ವತ್ತುಗಳನ್ನು ನನಗೆ ಮತ್ತು 1 ನೇ ಪ್ರತಿವಾದಿಗೆ ಜಂಟಿಯಾಗಿ ದಾನ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ . ನನಗೊಬ್ಬನಿಗೆ ಮಾಡಿರುತ್ತಾರೆ ಎನ್ನುತ್ತಾರೆ . ನಂತರ ನಾನು ಮತ್ತು 1 ನೇ ಪ್ರತಿವಾದಿ ನಮ್ಮ ತಂದೆಯಿಂದ ದಾನವಾಗಿ ಬಂದಂತಹ ಸ್ವತ್ತನ್ನು ಮತ್ತು ನಾವು ಸಂಪಾದಿಸಿದ ಸ್ವತ್ತುಗಳನ್ನು ನಿಪಿ 7 ರಂತೆ ಭಾಗ

ಮಾಡಿಕೊಂಡಿರುತ್ತೇವೆ ಎಂದರೆ ಭಾಗ ಮಾಡಿಕೊಂಡಿರುತ್ತೇವೆ ಎನ್ನುತ್ತಾರೆ. ನಿಪಿ 7 ರಂತೆ ಅದರ ಭಾಗ ಪಟ್ಟಿ ಅನುಸೂಚಿಯಲ್ಲಿ ತೋರಿಸಿದ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳು ಭಾಗ ಮಾಡಲು ಉಳಿದಿರುವುದಿಲ್ಲ ಎಂದು ಬರವಣಿಗೆ ಆಗಿದೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ನಮ್ಮ ತಂದೆಯವರ ಹೆಸರಿನಲ್ಲಿ ಇದ್ದ ಗ್ರಾಮ ಠಾಣಾ ಆಸ್ತಿಯನ್ನು ನಾನು ಮತ್ತು 1 ನೇ ಪ್ರತಿವಾದಿ ಭಾಗಮಾಡಿಕೊಂಡಿಲ್ಲ ಎನ್ನುತ್ತಾರೆ. ನಮ್ಮ ತಂದೆ ಹೆಸರಿನಲ್ಲಿ ಮೇಲೆ ಹೇಳಿದ ಗ್ರಾಮಠಾಣಾ ಆಸ್ತಿ ಇರುವ ಬಗ್ಗೆ ಖಾತೆ ಮತ್ತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ನಿಪಿ 7 ರಲ್ಲಿ ಬಂದಂತಹ ಎಲ್ಲಾ ಆಸ್ತಿಗಳನ್ನು ನಾನು ಮತ್ತು 1 ನೇ ಪ್ರತಿವಾದಿ ಮಾರಾಟ ಮಾಡಿ ಇಬ್ಬರೂ ಈಗ ಬೆಂಗಳೂರಿನಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ . ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಆಸ್ತಿ ಅಲ್ಲ ಅದ ಕಾರಣ ನಮ್ಮ ತಂದೆ ನಮಗೆ ಮಾಡಿದ ದಾನ ಪತ್ರದಲ್ಲಿ ಮತ್ತು ನಾವು ಮಾಡಿಕೊಂಡ ವಿಭಾಗ ಪತ್ರದಲ್ಲಿ ಸದರಿ ಆಸ್ತಿ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಸ್ವಾಧೀನದ ಅಧಾರದ ಮೇರೆಗೆ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಗೆ ಪಂಚಾಯಿತಿಯವರು ಖಾತೆ ಮಾಡಿದ್ದು ಸದರಿ ಖಾತೆ ಆಧಾರದ ಮೇರೆಗೆ ಸದರಿ ಸ್ವತ್ತನ್ನು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ . ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಆದ್ದರಿಂದ ನನಗೆ ಅದರಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ . ನನ್ನ ಮತ್ತು 1 ನೇ ಪ್ರತಿವಾದಿ ಮಧ್ಯೆಕುಟುಂಬದಲ್ಲಿ ಬಿನ್ನಾಬಿಪ್ರಾಯ ಇರುವುದರಿಂದ ಅವರಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್)
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್ (ಸಂಚಾರಿ ಪೀಠ ಬಂಗಾರಪೇಟೆ).